ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ
ಚನ್ನಗಿರಿ .

ಸಿಸಿ ನಂ. **66/2021**

ಹೆಸರುಃ  ನರಸೋಜಿ ರಾವ್ ಚಾಸಾಃ 7

ತಂದೆಃ ನಾಗೇಶ್ ರಾವ್ ಫ್ರಾಸಾ:2

ವಯಸ್ಸುಃ  64

ಉದ್ಯೋಗಃ ಟೈಲರಿಂಗ್

ವಾಸ ಸ್ಥಳಃ ಬಸವಪಟ್ಟಣ ಗ್ರಾಮ,  ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 29-07-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ದ.ಪ್ರ. ಸಂ ಕಲಂ 299 ರಡಿಯಲ್ಲಿ  ಮಾನ್ಯ ಸಸಅ ರವರಿಂದಃ**

ದಿಃ 21.02.2014 ರಂದು ಸಂಜೆ ಕೆಎ 27 5947 ನೇ ಆಟೋದಲ್ಲಿ ದಾಗಿನಕಟ್ಟೆಯಿಂ ನಾನು ಮತ್ತು ಕಂಚುಗಾರನಹಳ್ಳಿ ಚಂದ್ರಶೇಖರಪ್ಪ ಹಾಗೂ ಇತರರು ಬಸವಪಟ್ಟಣಕ್ಕೆ ಬರುತ್ತಿರುವಾಗ 6.45 ರ ಸುಮಾರಿಗೆ ಆರೋಪಿ ಕೆರೆ ಏರಿ ಮೇಲೆ ಆಟೋವನ್ನು ಅತೀವೇಗವಾಗಿ ಮತ್ತು ಅಜಾಗರುಾಕತೆಯಿಂದ ಚಾಲಾಯಿಸಿ ಚಂದ್ರಶೇಖರಪ್ಪನವರಿಗೆ ಅಪಘಾತ ಪಡಿಸಿರುತ್ತಾರೆ ಎಂದು ದಿಃ 22.02.2014 ರಂದು ಸ್ಥಳ ಪಂಚನಾಮೆ ಕಾಲಕ್ಕೆ ತೋರಿಸಿ ಹೇಳಿ ಬರೆಸಿರುತ್ತೇನೆ. ಸಾಕ್ಷಿಯ ಕೃತ್ಯ ನಡೆದ ಸ್ಥಳ ಪಂಚನಾಮೆಯಲ್ಲಿರುವ ಸಹಿಯನ್ನು ಗುರುತಿಸಿದ್ದರಿಂದ ನಿಪಿ 2 ಎಂದು ಸಹಿಯನ್ನು ನಿಪಿ  2 ಎ ಎಂದು ಗುರುತಿಸಲಾಯಿತು. ನಂತರ ನಾನು ಪೊಲೀಸರಿಗೆ ಈ ಬಗ್ಗೆ ಹಾಗೂ ಗಾಯಾಳು ಚಂದ್ರಶೇಖರಪ್ಪನವರ ಆಸ್ಪತ್ರೆಯಲ್ಲಿ ಮೃತ ಪಟ್ಟ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ಹಾಗೂ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

( **ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.**)

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ   ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**